ಓ.ಎಸ್. ನಂಃ 105/2023
ಪಿ.ಡಬ್ಲ್ಯೂ-1 (ಶಂಕರೆವ್ವ)

ದಿನಾಂಕ: 15-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎ.ಎಸ್.ಕೆ. ಪ್ರತಿವಾದಿ 2 ರಿಂದ 9 ರವರ ಪರ ವಕೀಲರಿಂದಃ**

ಈಗ ನಾನು ಯಾದವಾಡದಲ್ಲಿಯ ನೀರಾವರಿ ಕಚೇರಿಯಲ್ಲಿ ಕಳೆದ 7-8 ವರ್ಷದಿಂದ ಬಾಡಿಗೆಗೆ ಇದ್ದೇನೆ ಎಂದರೆ ಸರಿ. ಅದಕ್ಕಿಂತ ಮೊದಲು ನಾನು ಗುರುಲಿಂಗಪ್ಪ ಇವರ ಮನೆಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ರಡೇರಹಟ್ಟಿಯಲ್ಲಿ ನನ್ನ ಮಾವ ದುಂಡಪ್ಪ ಇವರ ಮನೆಯಲ್ಲಿ ಇದ್ದೆ, ಸದರಿ ಮನೆಯ ನಂಬರ ನನಗೆ ಗೊತ್ತಿಲ್ಲ. ನಾನು ವಾಸ ಇದ್ದ ಮನೆ ನನ್ನ ಮಾವ ದುಂಡಪ್ಪ ಇವರ ಮನೆ ಇರುತ್ತದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು ನನ್ನ ಗಂಡನ ಮನೆಯಲ್ಲಿ ಇದ್ದಾಗ ಆ ಮನೆಯಲ್ಲಿ ನಾನು, ನನ್ನ ಅತ್ತೆ, ಮಾವ, ಪ್ರತಿವಾದಿ 1, ಮೃತ ಬಸಪ್ಪ ಹಾಗೂ ಪ್ರತಿವಾದಿ 2 ರಿಂದ 5 ಸೇರಿ ಇದ್ದೆವು.

2. ನನ್ನ ಗಂಡ ತೀರಿಕೊಂಡ ದಿನಾಂಕ ನನಗೆ ಗೊತ್ತಿಲ್ಲ. ಆದರೆ ಈಗ 15 ವರ್ಷಗಳಾಗಿದೆ. ನನ್ನ ಗಂಡ ತೀರಿಕೊಂಡ ನಂತರ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿ. ನನ್ನ ತವರು ಮನೆಯಲ್ಲಿ 01 ತಿಂಗಳ ಇದ್ದು ನಂತರ ನೀರಾವರಿ ಕಚೇರಿಯಲ್ಲಿ ಬಾಡಿಗೆಗೆ ಇದ್ದೇನೆ. ನಂತರ ನಾನು ನನ್ನ ಮಾವನ ಮನೆಯಲ್ಲಿ ನನ್ನ ಗಂಡನ ಸಹೋದರರ ಜೊತೆ ಕೂಡಿ ಇಲ್ಲ ಎಂದರೆ ಸರಿ.

3. ನನ್ನ ಪಡಿತರ ಚೀಟಿ ಮತ್ತು ಆಧಾರ ಕಾರ್ಡ ರಡೇರಹಟ್ಟಿಯ ಗ್ರಾಮದ ವಿಳಾಸದಲ್ಲಿ ಇವೆ ನಾನು ಅದನ್ನು ಹಾಜರ ಮಾಡಿದ್ದೇನೆ. ಐರಕ್ಕನವರ ಹೊಲದಲ್ಲಿ ಅಂದರೆ ಸರ್ವೆ ನಂ.622/6 ರಲ್ಲಿ ನಾವು ಎಲ್ಲರೂ ಕೂಡಿಯೆ ಇದ್ದೇವೆ. ಸದರಿ ಜಮೀನಿನಲ್ಲಿ ಮನೆ ಇದೆ ಎಂದರೆ ಸರಿ. ಒಟ್ಟು ನಾಲ್ಕು ಮನೆಗಳಿವೆ. ಸದರಿ ಮನೆಗಳು ತೋಟದಲ್ಲಿ ಇದ್ದುದ್ದರಿಂದ ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ.

4. ರಡೇರಹಟ್ಟಿ ಗ್ರಾಮದಲ್ಲಿ ಪ್ರತಿವಾದಿ 5 ರವರ ಹೆಸರಿನಲ್ಲಿ ಒಂದು ಮನೆ ಇದೆ ಎಂದರೆ ಸದರಿ ಮನೆ ನನ್ನ ಮಾವ ದುಂಡಪ್ಪ 5ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ನನ್ನ ಮಾವ ತನ್ನ ಜೀವಿತಾವಧಿಯಲ್ಲಿ ಅವರ ಎಲ್ಲ ಮಕ್ಕಳ ಹೆಸರಿನಲ್ಲಿ ಆಸ್ತಿಗಳನ್ನು ಮಾಡಿರುತ್ತಾರೆ. ನನ್ನ ಮಾವ ಎಲ್ಲ ಮಕ್ಕಳ ಹೆಸರಿನಲ್ಲಿ ಆಸ್ತಿ ಮಾಡಿ ಎಷ್ಟು ವರ್ಷಗಳಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಾವ 1988 ರಲ್ಲಿ ಅವರ ಎಲ್ಲ ಮಕ್ಕಳಿಗೆ ಪಾಲು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ಸರ್ವೆ ನಂ.622/2 ನನ್ನ ಮಾವ ನನ್ನ ಗಂಡನ ಹೆಸರಿನಲ್ಲಿ ಸದರಿ ಜಮೀನು ಮಾಡಿಕೊಟ್ಟಿದ್ದರು ಯಾವ ನಾತೆಯಿಂದ ಮಾಡಿಕೊಟ್ಟಿದ್ದರು ನನಗೆ ಗೊತ್ತಿಲ್ಲ. ನನ್ನ ಗಂಡ ಬಸಪ್ಪ ಇವರಿಗೆ ನಾನು ಒಬ್ಬಳೇ ವಾರಸುದಾರಳು ಎಂದರೆ ಸರಿ. ನನ್ನ ಗಂಡ ಮೃತಪಟ್ಟಾಗ ಅವರ ತಾಯಿ ಜೀವಿತ ಇದ್ದರು ಎಂದರೆ ಸರಿ. ನನ್ನ ಗಂಡನ ಹೆಸರಿನಲ್ಲಿ ಇದ್ದ ಆಸ್ತಿ ಅವರ ಮರಣಾ ನಂತರ ನನ್ನ ಹೆಸರಿಗೆ

ಆಗಿರುತ್ತದೆ ಎಂದರೆ ಸರಿ. ನನ್ನ ಹೆಸರಿಗೆ ಆದ ಆಸ್ತಿಯನ್ನು ನಾನು ನನ್ನ ಅಣ್ಣ ಪ್ರತಿವಾದಿ 9 ರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ.

6. ಸರ್ವೆ ನಂ.26/3 ನನ್ನ ಗಂಡನ ಹೆಸರಿನಲ್ಲಿ ಇತ್ತು ಅವರ ಮರಣಾ ನಂತರ ಆ ಜಮೀನು ನನಗೆ ಬಂದಿರುತ್ತದೆ. ಈ ವಿಷಯವನ್ನು ನಾನು ಈ ದಾವೆ ಹೂಡುವ ಸಮಯದಲ್ಲಿ ನನ್ನ ವಕೀಲರಿಗೆ ಹೇಳಿದ್ದೆ, ನನಗೆ ಓದಲು ಬರುವುದಿಲ್ಲ. ಈ ದಾವೆಗೆ ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆ ಹಾಗೂ ಏನೇನು ದಾಖಲೆಗಳನ್ನು ಹಾಜರ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಮ್ಮ ವಕೀಲರಿಂದಲು ಸಹ ನಾನು ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆ ಹಾಗೂ ಯಾವ ಯಾವ ದಾಖಲೆಗಳನ್ನು ಹಾಜರ ಮಾಡಿದ್ದಾರೆಂದು ನಾನು ಕೇಳಿ ತಿಳಿದುಕೊಂಡಿಲ್ಲ.

7. ನನಗೆ ಆಸ್ತಿ ಬೇಕು ಎಂದು ಹೇಳಿ ನಾನು ಈ ದಾವೆ ಮಾಡಿರುತ್ತೇನೆ. ನನ್ನ ಮಾವ ಗಳಿಸಿದ ಎಲ್ಲ ಆಸ್ತಿಗಳಲ್ಲಿ ಪಾಲು ಬೇಕು ಎಂದು ಹೇಳಿ ಈ ದಾವೆ ಮಾಡಿದ್ದೇನೆ. ನನಗೆ ನನ್ನ ಮಾವ ಗಳಿಸಿದ ಅಸ್ತಿಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ. ನನ್ನ ಮಾವನ ಆಸ್ತಿಗಳು ಯಾವ ಯಾವ ಊರಲ್ಲಿ ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ಎಷ್ಟು ಎಕರೆಯಲ್ಲಿ ನಾನು ಪಾಲು ಕೇಳಿದ್ದೇನೆಂದು ಹೇಳಲು ಬರುವುದಿಲ್ಲ. ವಾದ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

8. ದಾವಾ ಆಸ್ತಿಗಳೆಲ್ಲವೂ ನೀರಾವರಿ ಜಮೀನುಗಳು ಇರುತ್ತವೆ. ನನ್ನ ಮಾವ ದುಂಡಪ್ಪ ಇವರ ತಂದೆಯ ಹೆಸರು ಗಿರಿಮಲ್ಲಪ್ಪ. ಗಿರಿಮಲ್ಲಪ್ಪ ಇವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಅವರ ತಂದೆ ಗಿರಿಮಲ್ಲಪ್ಪ ಇವರಿಂದ ಎಷ್ಟು ಆಸ್ತಿಗಳು ಬಂದಿವೆ ಎಂದು ನನಗೆ ಗೊತ್ತಿಲ್ಲ. ಗಿರಿಮಲ್ಲಪ್ಪ ಇವರಿಗೆ ಯಾವುದೇ ಜಮೀನು ಇರಲಿಲ್ಲ, ಆದ್ದರಿಂದ ನನ್ನ ಮಾವನಿಗೆ ಅವರ ತಂದೆ ಗಿರಿಮಲ್ಲಪ್ಪನಿಂದ ಯಾವುದೇ ಅಸ್ತಿ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಎಷ್ಟು ಆಸ್ತಿ ಖರೀದಿ ಮಾಡಿದ್ದರು ನನಗೆ ಗೊತ್ತಿಲ್ಲ, ಆದರೆ ಅವರಿಗೆ 22ಎಕರೆ ಜಮೀನು ಇತ್ತು.

9. ನನ್ನ ಮದುವೆಯಾಗಿ ಸುಮಾರು 25-26 ವರ್ಷಗಳಾಗಿದೆ. ನನ್ನನ್ನು ಬಸಪ್ಪ ಮದುವೆ ಆಗುವುದಕ್ಕಿಂತ ಪೂರ್ವದಲ್ಲಿ ತಂಗೆವ್ವ ಎಂದು ಹೆಂಡತಿ ಇದ್ದರು ಎಂದರೆ ಸರಿಯಲ್ಲ. ತಂಗೆವ್ವ ಇವರೂ ಸಹ ಜೀವಿತ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಬಸಪ್ಪ ಇವರ ಎರಡನೇ ಹೆಂಡತಿ ಎಂದರೆ ಸರಿಯಲ್ಲ. ತಂಗೆವ್ವ ತಂದೆ ಗುರುಪಾದಪ್ಪ ಬಿಜಗುಪ್ಪಿ ಸಾಕೀನ-ರಡೇರಹಟ್ಟಿ ಇವರು ಬಸಪ್ಪ ಇವರ ಮೊದಲನೆ ಹೆಂಡತಿ ಎಂದರೆ ಸರಿಯಲ್ಲ. ತಂಗೆವ್ವ ಇವರು ಬಸಪ್ಪ ಇವರ ಜೊತೆ 10 ವರ್ಷ ವಹಿವಾಹಿಕ ಜೀವನ ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಂಗೆವ್ವ ಇವರಿಗೆ ಮಕ್ಕಳು ಆಗದೇ ಇದ್ದುದ್ದರಿಂದ ಬಸಪ್ಪ ನನ್ನನ್ನು ಮದುವೆ ಆಗಿರುತ್ತಾರೆ ಎಂದರೆ ಸರಿಯಲ್ಲ.

10. ನನ್ನ ಅತ್ತೆ ನೀಲವ್ವ ಅಂದರೆ 7ನೇ ಪ್ರತಿವಾದಿ ನನ್ನ ಮೇಲೆ ಒಂದು ವಾಟ್ನಿ ದಾವೆ ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿ ತಕರಾರು ಹಾಕಿದ್ದೆ ಎಂದರೆ ಸರಿ. ಸದರಿ ತಕರಾರಿನಲ್ಲಿ ನಾನು ಈಗಾಗಲೇ ವಾಟ್ನಿಯಾಗಿದೆ ನನ್ನ ಪಾಲಿಗೆ ಬಂದ ಆಸ್ತಿಗಳು ನನ್ನ ಸ್ವಂತ ಆಸ್ತಿಗಳು ಹೇಳಿದ್ದೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನನಗೆ ಅರ್ಧ ಪಾಲು, ನನ್ನ ಅತ್ತೆಗೆ ಅರ್ಧ ಪಾಲು ಕೊಡಬೇಕೆಂದು ತೀರ್ಪು ಆಗಿರುತ್ತದೆ ಎಂದರೆ ಸರಿಯಲ್ಲ.

10. 1ನೇ ಪ್ರತಿವಾದಿ ನನ್ನ ಮೇಲೆ ಓ.ಎಸ್.ನಂ.267/2011ರಲ್ಲಿ ಪಾಲು ಕೋರಿ ಒಂದು ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಎಸ್.ಎ.ಪಾಟೀಲ ವಕೀಲರನ್ನು ನೇಮಕ ಮಾಡಿಕೊಂಡಿದ್ದೆ. ಓ.ಎಸ್.ನಂ.267/2011ರಲ್ಲಿ ನನ್ನ ಸಾಕ್ಷಿ ಅಗಿದೆಯೋ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಸಾಕ್ಷಿ ನುಡಿದಿದ್ದರೂ ಸಹ ಸಾಕ್ಷಿ ನುಡಿದಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಈಗಾಗಲೇ ವಾಟ್ನಿ ಆಗಿದೆ ಎಂದು ನಾನು ಸಾಕ್ಷಿ ನುಡಿದಿದ್ದೆ ಎಂದರೆ ಸರಿಯಲ್ಲ. ಅದೇ ರೀತಿ ವಾಟ್ನಿಯಾದ ನಂತರ ನನ್ನ ಗಂಡನ ಪಾಲಿಗೆ ಬಂದ ಜಮೀನುಗಳನ್ನು ಬ್ಯಾಂಕ ಮತ್ತು ಸೊಸೈಟಿಯಲ್ಲಿ ಸಾಲ ಮಾಡಿ ಜಮೀನುಗಳನ್ನು ಸುಧಾರಣೆ ಮಾಡಿ ಬೆಳೆಗಳನ್ನು ಬೆಳೆಯುತ್ತಿದ್ದೇವೆ ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ